26	ಮಡಿಕೇರಿ	---	4
27	ಉಡುಪಿ	43 ಎಕರೆ 87 ಸೆಂಟ್ಸ್	3
28	ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ	---	---
29	ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ	2585 ಎಕರೆ 18"" ಗುಂಟೆ	36
30	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	30 ಎಕರೆ 34 ಗುಂಟೆ	---
31	ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ	125 ಎಕರೆ 34 ಗುಂಟೆ	6
	ಒಟ್ಟು	5587 ಎಕರೆ 19 ಗುಂಟೆ	188

ವಾಣಿಜ್ಯ ಇಲಾಖೆಯಲ್ಲಿ ಸಂಗ್ರಹವಾದ ತೆರಿಗೆ ಹಣ

1303(1583); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ),

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ ವಿವಿಧ ರೂಪದಲ್ಲಿ ಸಂಗ್ರಹವಾದ ತೆರಿಗೆ ಹಣವೆಷ್ಟು (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಹಾಗಿದ್ದಲ್ಲಿ, ತೆರಿಗೆ ರೂಪದಲ್ಲಿ ವರ್ಷಕ್ಕೆ ಎಷ್ಟು ಹಣದ ಮೊತ್ತದ ಹಣವನ್ನು ಕ್ರೂಢೀಕರಿಸುವ ಗುರಿ ಹೊಂದಲಾಗಿತ್ತು; ಕ್ರೂಢೀಕರಿಸಿದ ಹಣವೆಷ್ಟು (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು);

ಇ) ರಾಜ್ಯದಲ್ಲಿ ₹ 10.00 ಲಕ್ಷಗಳಿಗೂ ಹೆಚ್ಚು ಮೊತ್ತದ ಹಣವನ್ನು ವಾಣಿಜ್ಯ ತೆರಿಗೆ ಕಟ್ಟದೆ ವಂಚಿಸಿರುವ ಸಂಸ್ಥೆ/ವ್ಯಕ್ತಿಗಳ ಹಾಗೂ ಇವರ ವಿರುದ್ಧ ತೆಗೆದುಕೊಂಡ ಕ್ರಮಗಳೇನು (ಜಿಲ್ಲಾವಾರು ಮಾಹಿತಿ ನೀಡುವುದು)?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಕಳೆದ 3 ವರ್ಷದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ ರಾಜ್ಯ ಮಟ್ಟದಲ್ಲಿ ಸಂಗ್ರಹವಾದ ವರ್ಷವಾರು ತೆರಿಗೆ ಮೊತ್ತಗಳ ವಿವರಗಳು ಕೆಳಗಿನಂತಿವೆ (ಇಲಾಖೆ ಜಿಲ್ಲಾವಾರು ಮಾಹಿತಿಯನ್ನು ಸಂಗ್ರಹಿಸುವುದಿಲ್ಲ);

(ಕೋಟಿ ರೂ.ಗಳಲ್ಲಿ)

ವರ್ಷ	ಸಂಗ್ರಹಣೆ
2010–11	22701
2011–12	28000
2012–13	31865

ಆ) ಕಳೆದ 3 ವರ್ಷದ ವಾಣಿಜ್ಯ ತೆರಿಗೆ ಸಂಗ್ರಹಣೆ ಗುರಿ ಮತ್ತು ಸಂಗ್ರಹಿಸಿದ ತೆರಿಗೆ ವಿವರ ಕೆಳಗಿನಂತಿದೆ:

(ಕೋಟಿ ರೂ.ಗಳಲ್ಲಿ)

ವರ್ಷ	ಆಯವ್ಯಯ ಅಂದಾಜು	ಸಂಗ್ರಹಣೆ
2010–11	22,500	22701
2011–12	26,740	28000
2012–13	31,100	31865

ಇ) ನ್ಯಾಯಾಲಯದ ತಡೆಯಾಜ್ಞೆ ಇಲ್ಲದ ಪ್ರಕರಣಗಳಲ್ಲಿ ಕಾನೂನಿನನ್ವಯ ವಸೂಲಿ ಕ್ರಮಗಳನ್ನು ಜರುಗಿಸಲಾಗಿರುತ್ತದೆ.

ನೀರಿನ ದರದ ಹೆಚ್ಚಳ

1304(1584); ಶ್ರೀ. ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)